## ಹಣ-ಪ್ರೇಮದ ನಡುವೆ...

ಹಣ ಮತ್ತು ಪ್ರೇಮದ ನಡುವೆ ತರುಣನೊಬ್ಬ ಜೋಕಾಲಿಯಾಡುವ ಕಥೆಯ ಚಿತ್ರ 'ಜಗತ್ ಕಿಲಾಡಿ'. ಈ ಮುನ್ನ ಜಗ್ಗೇಶ್ ನಟನೆಯಲ್ಲಿ ಇದೇ ಹೆಸರಿನ ಸಿನಿಮಾ ತೆರೆಕಂಡಿದೆಯಾದರೂ, ತಮ್ಮ ಚಿತ್ರದ ಕಥೆಗೆ ಇದೇ ಶೀರ್ಷಿಕೆ ಹೊಂದುತ್ತದೆ ಎನ್ನುವ ನಂಬಿಕೆ ಚಿತ್ರದ ನಿರ್ದೇಶಕ ಧೀರೇಂದ್ರ. ಪ್ರೀತಿ ಮತ್ತು ಹಣದ ನಡುವಿನ ವ್ಯತ್ಯಾಸವನ್ನು ಪ್ರೇಕ್ಷಕರಿಗೆ ಮನದಟ್ಟು ಮಾಡಿಸುವುದು ನಿರ್ದೇಶಕರ ಉದ್ದೇಶ.

ಬೆಂಗಳೂರು, ಬಳ್ಳಾರಿ ಹಾಗೂ ಕೊಳ್ಳೇಗಾಲದ ಪರಿಸರದಲ್ಲಿ ಚಿತ್ರೀಕರಣ ನಡೆದಿದ್ದು ಈಗ ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ನಡೆಯುತ್ತಿವೆ. ನಿರಂಜನ್ ಕುಮಾರ್ ಶೆಟ್ಟಿ ಹಾಗೂ ಅಮಿತಾ ಕುಲಾಲ್ ಚಿತ್ರದ ನಾಯಕ ನಾಯಕಿ. ನಿರಂಜನ್ ಅವರ ಪಾತ್ರಕ್ಕೆ ಹಲವು ಶೇಡ್‌ಗಳು ಇವೆಯಂತೆ. ಅಂದಹಾಗೆ, ಇದು ಕೂಡ ರೀಮೇಕ್ ಚಿತ್ರ. ತಮಿಳಿನ 'ಸತುರಂಗ ವೇಟ್ಟೈ' ಎನ್ನುವ ಚಿತ್ರವನ್ನು ಧೀರೇಂದ್ರ ಕನ್ನಡಕ್ಕೆ ತರುತ್ತಿದ್ದಾರೆ.

ಸುಚೇಂದ್ರಪ್ರಸಾದ್, ರಂಗಾಯಣ ರಘು, ಜೈಜಗದೀಶ್, ಮೈಕೋ ನಾಗರಾಜ್, ಪವನ್ಕುಮಾರ್ ಹಾಗೂ ಸುನೇತ್ರಾ ಪಂಡಿತ್ ತಾರಾಗಣದಲ್ಲಿರುವ ಕೆಲವರು. ಸಿನಿಟೆಕ್ ಸೂರಿ ಛಾಯಾಗ್ರಹಣ ಹಾಗೂ ಗಿರಿಧರ್ ದಿವಾನ್ ಸಂಗೀತ ಚಿತ್ರಕ್ಕಿದೆ. ಆಗಸ್ಟ್‌ನಲ್ಲಿ 'ಜಗತ್ ಕಿಲಾಡಿ' ಚಿತ್ರವನ್ನು ತೆರೆ ಕಾಣಿಸಲು ಚಿತ್ರತಂಡ ಉದ್ದೇಶಿಸಿದೆ.





## ಮತ್ತೆ ಮತ್ತೆ ಅಮ್ಮ!

ಚಿರಂಜೀವಿ ಸರ್ಜಾ ಹಾಗೂ ನಿಶ್ವಿಕಾ ನಾಯ್ಡು ಮುಖ್ಯಪಾತ್ರಗಳಲ್ಲಿ ನಟಿಸಿರುವ 'ಅಮ್ಮಾ ಐ ಲವ್ ಯು' ಚಿತ್ರಮಂದಿರಗಳ ಹೊಸ್ತಿಲಲ್ಲಿದೆ (ಜೂನ್ 15ರಂದು ತೆರೆಗೆ). ಇದು ದ್ವಾರಕೀಶ್ ನಿರ್ಮಾಣದ ಐವತ್ತೊಂದನೇ ಸಿನಿಮಾ. ಅವರ ಸಂಸ್ಥೆಯ ಹಿಂದಿನ ಸಿನಿಮಾ 'ಚೌಕ'ದಲ್ಲಿ ಅಪ್ಪನ ಕುರಿತ ಭಾವುಕ ಎಳೆಯೊಂದಿತ್ತು. ಈಗ ಅಮ್ಮನ ಸರದಿ. ಈ ಚಿತ್ರವನ್ನು ವಿಶ್ವದ ಎಲ್ಲ ತಾಯಂದಿರಿಗೆ ಅರ್ಪಿಸಲಾಗಿದೆ ಎಂದು ಚಿತ್ರತಂಡ ಹೇಳಿಕೊಂಡಿದೆ.

ಕನ್ನಡದ 'ಅಮ್ಮ' ತಮಿಳಿನ 'ಪಿಚ್ಚೈಕಾರನ್' ಚಿತ್ರದ ರೀಮೇಕ್. ಕನ್ನಡೀಕರಣದ ಅಮ್ಮನ ಪಾತ್ರದಲ್ಲಿ ದಕ್ಷಿಣಭಾರತದ ಖ್ಯಾತ ನಟಿ ಸಿತಾರಾ ಅಭಿನಯಿಸಿದ್ದಾರೆ. ಚಿತ್ರದ ನಿರ್ದೇಶನ ಕೆ.ಎಂ. ಚೈತನ್ಯ ಅವರದು.

ಚಿತ್ರದ ಪ್ರಚಾರಕ್ಕಾಗಿ ಬಿಡುಗಡೆಯಾದ ಅಮ್ಮನ ಕುರಿತ ಗೀತೆ ಜನಪ್ರಿಯವಾಗಿರುವುದು ಚಿತ್ರತಂಡಕ್ಕೆ ಖುಷಿಕೊಟ್ಟಿದೆ. ನಾಗೇಂದ್ರಪ್ರಸಾದ್ ರಚಿಸಿದ್ದ ಈ ಗೀತೆಯನ್ನು ಸುನೀಲ್ ಕಶ್ಯಪ್ ಹಾಡಿದ್ದಾರೆ. ರಾಜ್‌ಕುಮಾರ್, ವಿಷ್ಣುವರ್ಧನ್, ಅಮಿತಾಭ್ ಬಚ್ಚನ್, ರಜನಿಕಾಂತ್, ಚಿರಂಜೀವಿ, ಸಚಿನ್ ತೆಂಡೂಲ್ಕರ್, ಸೈನಾ ನೆಹ್ವಾಲ್, ಸಲ್ಮಾನ್ ಖಾನ್, ರಾಹುಲ್ ಗಾಂಧಿ, ಪಿ.ಟಿ. ಉಷಾ – ಹೀಗೆ ವಿವಿಧ ಕ್ಷೇತ್ರಗಳ ಖ್ಯಾತನಾಮರು ತಮ್ಮ ತಾಯಂದಿರೊಂದಿಗೆ ಇರುವ ಫೋಟೊಗಳನ್ನು ಈ ಗೀತೆಯಲ್ಲಿ ಬಳಸಿಕೊಳ್ಳಲಾಗಿದೆಯಂತೆ.

ಅಮ್ಮ ಮತ್ತು ಮಗನ ಭಾವುಕ ಕಥೆ ಚಿತ್ರದಲ್ಲಿದೆಯಂತೆ. ತನ್ನ ತಾಯಿಯನ್ನು ರಕ್ಷಿಸಲು ಯಾವ ಬಗೆಯ ತ್ಯಾಗಕ್ಕೂ ಸಿದ್ಧವಾಗುವ ಮಗನ ಪಾತ್ರವನ್ನು ಚಿರಂಜೀವಿ ಸರ್ಜಾ ಇಷ್ಟಪಟ್ಟು ಅಭಿನಯಿಸಿದ್ದಾರೆ. ಅವರಿಗೆ ಜೋಡಿಯಾಗಿ ನಟಿಸಿರುವ ನಿಶ್ವಿಕಾ ಅವರಿಗಿದು ನಾಯಕಿಯಾಗಿ ಮೊದಲ ಸಿನಿಮಾ. ಚೊಚ್ಚಿಲ ಚಿತ್ರದಲ್ಲೇ ಅನುಭವಿ ಚಿತ್ರತಂಡದೊಂದಿಗೆ ನಟಿಸಿದ ಖುಷಿ ಅವರದು. ಪ್ರಕಾಶ್ ಬೆಳವಾಡಿ, ಬಿರಾದಾರ್, ರವಿ ಕಾಳೆ, ಚಿಕ್ಕಣ್ಣ ಹಾಗೂ ಗಿರಿ ದ್ವಾರಕೀಶ್ ತಾರಾಗಣದಲ್ಲಿರುವ ಪ್ರಮುಖರು. ಗುರುಕಿರಣ್ ಸಂಗೀತ ಹಾಗೂ ಶೇಖರ್ ಚಂದ್ರು ಛಾಯಾಗ್ರಹಣ ಚಿತ್ರಕ್ಕಿದೆ.

■ ರಘು